


ಇದುವರೆಗೂ ಬಿಚ್ಚಿ ನೋಡಿಲ್ಲ. ಆಕಿ ಇದರೊಳಗ ಏನ ಇಟ್ಟಿದ್ಲು ಅಂತಾನೂ ನಂಗ ಗೊತ್ತಿಲ್ಲ. ಒಂದು ಬುಗುಡಿ ಎಲ್ಲಿ ಹೋತು ಗೊತ್ತಿಲ್ಲ, ಪದಕದ ಸರಾ ಏನಾತು ಒಂದೂ ಗೊತ್ತಿಲ್ಲ' ಅಂತಾ ಊರ ದೇವರು ವೀರಭದ್ರನ ಮೇಲೆ ಆಣೆಮಾಡಿ 'ನಾ ಏನಾದರೂ ಅನ್ಯಾಯ ಮಾಡಿ, ನನ್ನ ಧರ್ಮಕ್ಕ ವಿರುದ್ಧ ನಡಕೊಂಡಿದ್ರ, ತಿಂಗಳ ತುಂಬುಗೊಡದ ನನ್ನ ನಾಲಿಗೆ ಸೇದಲಿ. ಇದು ಕರೆ ಈರಪ್ಪನ ಮೇಲಾಣೆ' ಅಂತ ಪ್ರಮಾಣ ಮಾಡಿದ್ಲು. ಕಮಲವ್ವನಿಗೆ ತನ್ನ ಅತ್ತಿ ದಾಗೀನು ಏನು ಇದ್ವು ಅನ್ನೋದು ಗೊತ್ತಿದ್ರೂ ಗೌಡಶಾನಿ ಮ್ಯಾಲೆ ಸುಳ್ಳ ಆಪಾದನೆ ಮಾಡಿದ್ಲು. ಮಗಳು ಶಾರವ್ವನೂ ಎಲ್ಲಾ ಗೊತ್ತಿದ್ರೂ ಸುಮ್ಮನೆ ಇದ್ಲು. ಊರ ಹಿರಿಯರು ಪಂಚಾಯತಿ ತೀರ್ಮಾನವನ್ನು ಒಂದು ತಿಂಗಳ ತನಕ ಮುಂದ ಹಾಕಿದ್ರು. ಸತ್ತ ಮನ್ಯಾಗಿನ ಕೆಲಸಾ ಬಿಟ್ಟು ದಾಗೀನ ಆಸೆಕ ಸೊಸಿ ಸಾವಂತ್ರಿ ಪಂಚಾಯತಿ ಮುಂದ ಇವತ್ತ ತೀರ್ಮಾನ ಆಗಬೇಕು ಅಂತಾ ಹಟಾ ಹಿಡದ್ಲು. ಆವಾಗ ಮೌನ ಮುರಿದ ಶೆಟ್ರು ಮಾತ್ರ, ತನ್ನ ತಂಗಿ ಅಂತಲೇ ಭಾವಿಸಿದ್ದ ಗೌಡಶಾನಿ ಗೌರಮ್ಮನ ಮೇಲಿನ ನಂಬಿಕೆಯಿಂದ ನಾಲ್ಕು ಮಾತು ಆಡಿದ್ರು, 'ಸಾವಂತ್ರಿ ಮತ್ತು ಗೌರಮ್ಮ ಜೀವದ ಗೆಳತಿಯರು. ಸಾವಂತ್ರಿ ದಾಗೀನುಗಳ ಬಗ್ಗೆ ಹೇಳೂದಾದ್ರ ಮುತ್ತಿನ ಬುಗುಡಿ ಮತ್ತು ಪದಕದ ಸರದ ವಿಷಯ ನನಗ ತಿಳಿದಿಲ್ಲ. ಸಾವಂತ್ರಿ ದಿನಾ ಹಾಲಮಾರತಿದ್ಲು. ಆವಾಗಾವಾಗ ಮಾತ್ರ ಮಂದಿನೋಡಿ, ಬಂದ ಪಾಯಿದೆದಾಗ ನಾನು ದಾಗೀನು ಮಾಡಸ್ಕೋತಿನಿ ಅಂತಾ ಮಾತ್ರ ಹೇಳತಿದ್ಲು ವಿನಃ ಮಾಡಿಸಿದ್ದು ಗೊತ್ತಿಲ್ಲ. ದಾಗೀನು ಮಾಡಿಸಿದ್ರ ಆಕಿ ನನ್ನ ಮುಂದ ಹೇಳೇ ಹೇಳತಿದ್ಲು, ಮತ್ತ ಹಿಂಗ ಮುಚ್ಚುಮರಿ ಮಾಡಿ ಯಾವ ಕೆಲಸಾನೂ ಆಕಿ ಮಾಡತಿದ್ದಿಲ್ಲ, ದಾಗೀನು ಮಾಡಸುವಾಗ